ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮರ್ತುಂಗಳ 34, 35ನೇ ನಂಬರ್ ಗೆಜೆಟ್ ಗಳಲ್ಲಿ ಛಾಯಿಷ್ ಮಾಡಲ್ಪಟ್ಟ್ಯ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ಓದ ಲ್ಪಡುವವು.

ತಾರೀಖು 21ನೇ ಸೆಪ್ಟಂಬರು 1889.

ಈ ಕೆಳಗೆ ನಮೂದಾಗಿವೆ ಆನೆಗಳು ಮತ್ತು ಹರಾಜ್ ತಾರೀಖುವರಿಗೆ ಹಿಡಿಯಲ್ಪಡುವ ಆನೆಗಳು ಸಹ 1889ನೇ ಇಸವಿ ನವಂಬರು ತಾರೀಖು 4ರಲ್ಲು ಮೈಸೂರಿನಿಂದ 30 ಮೈಲಿ ಛಾಸಲೆಯಲ್ಲಿ ಇರುವ ಪೆಗ್ಗಡದೇವನ ಕೋಟೇ ತಾಲ್ಲೂಕು ಹಂಪಾಪುರದ ಪೊಕ್ಕಾಂನಲ್ಲಿ ಫಾರೆಸ್ಟ್ ಅಸಿಸ್ಟೆಂಟ್ ಕಂಜರ್ವೇಟರವರಿಂದ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

ನಂಬರು.	ಹೆಸರು.	ಜಾತಿ.	ಯೆತ್ತರ.		ಹಿಡದ ತಾರೀಖು.	ಷರಾ.
			ಅಡಿ	ಅಂಗುಲ		
1	ಬಲರಾಮ	ಗಂಡು	5	2	88ನೇ ಡಿಕಂಬರ್ ತಾರೀಖು 2	
2	ಕೃಷ್ಣ	ಪಿಟೋ	4	..	22—6—89	

ಷರಪ್ತುಗಳು—ಸರ್ಕಾರ ಹರಾಜ್ ಕೈದಾದೆ ಕೂಡ್ಲೆ ಚದ ದರಖಾಸ್ತುದಾರನು ಹರಾಜ್ ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿ ಶೇವಣಿಯನ್ನ ಪಾವತಿಮಾಡತಕ್ಕದ್ದು. ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳವೊಳಗಾಗಿ ಪಾವತಿಯಿಂದ ಆನೆಯನ್ನು ತೆಗದುಕೊಂಡು ಹೋಗತಕ್ಕದ್ದು ಇದಕ್ಕೆ ತಪ್ಪಿದಲ್ಲಿ ಶೇವಣಿ ಮೊಬಲಗು ಸರ್ಕಾರಕ್ಕೆ ವಾಜಲ್ಯಾಡಿಕೊಳ್ಳಲಾಗುತ್ತೆ ಮತ್ತು ಸದರೀ ಆನೆಗಳು ಪುನಹಾ ಹರಾಜ್ ಮಾಡುವದರಲ್ಲಿ ವುಂಟಾಗಬಹುದಾದ ಲುಕ್ಸಾನಿಗೆ ಮೊದಲ್ ದರಖಾಸ್ತುದಾರನ್ನ ಗುರಿಮಾಡಲಾಗುತ್ತೆ. ನಫೇ ಬಂದಲ್ಲಿ ದರಖಾಸ್ತುದಾರನಿಗೆ ಕೊಡಲಾಗುವದಿಲ್ಲಾ ದರಖಾಸ್ತುದಾರರು ಅವರು ಪಡಕೊಂಡ ಆನೆಗಳಿಗೆ ಹರಾಜ್ ತಾರೀಖು ಲಾಗಾಯಿತು ತಗಲುವ ಖರ್ಚು ವಹಿಸಬೇಕು.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಎಕ್ಸೈಜ್ ಇಲಾಖೆ.

ಪ್ರಕಟನೆ.

ತಾರೀಖು 24ನೇ ಸೆಪ್ಟಂಬರ್ 1889ನೇ ಇಸವಿ ನಂಬರ್ 1029—23.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರಲ್ಲಿರುವ ಸೆಂಟ್ರಲ್ ಡಿಸ್ಟಿಲರಿಗೆ ಈ ಕೆಳಗೆ ನಮೂದಿಸುವ ಸಾಮಾನುಗಳನ್ನ ಸರಬರಾಯಿ ಮಾಡುವದಕ್ಕೆ ಬೆಂಗಳೂರಲ್ಲಿರುವ ಮೈಸೂರು ಶೀಮೆಯ ಎಕ್ಸೈಸ್ ಕಮ್ಮಿಷನರ್ ಸಾಹೆಬರವರ ಆಫಿಸಿನಲ್ಲಿ ಸ್ಯ 1889ನೇ ಇಸವಿ ಸೆಪ್ಟಂಬರ್ ತಾರೀಖು 30ರ ವರಿಗೂ ಮೊಹರಾದ ಟೆಂಡರುಗಳು ಯಾನೆ ದರಖಾಸ್ತುಗಳು ತೆಗದು ಕೊಳ್ಳಲ್ಪಡುವವು.

ಎರಡು ಗ್ಯಾಲ್ಸ್ ಸಾರಾಯಿ ಹಿಡಿಯತಕ್ಕ ಜಾಡಿಗಳು .. .. 1600.
ಮೇಲಿನ ಜಾಡಿಗಳಿಗೆ ಸರಿಯಾದ ಚೀಣಿಮೊಣ್ಣು ಬಿರಟೆಗಳು .. .. 1600.

ಮೇಲ್ಕಂಡ ಜಾಡಿ ಮತ್ತು ಬಿರಟೆಗಳು ಪೂರ್ತಿಯಾಗಿ ಸರಬರಾಯಿ ಮಾಡಲ್ಪಡುವ ಪರ್ಯಂತರ ಕಂಟ್ರಾಕ್ಟುದಾರನು ದಫಾ ಒಂದಕ್ಕೆ ಐವತ್ತಕ್ಕೆ ಕಮ್ಮಿಯಿಲ್ಲದಂತೆ ಅವೇಕ್ಷಿಸಲ್ಪಟ್ಟ್ಯ ಹಾಗ್ಲೂ ತಂದು ಒಪ್ಪಿಸಬೇಕು.

2. ಪ್ರತಿ ದರಖಾಸ್ತಿನೊಡನೆ ಮುವ್ವತ್ತು ರೂಪಾಯಿಗಳ ಶೇವಣಿಯು ನೋಟು ಮೂಲಕವಾಗಿ ಸಂಚಕಾರ ತರೀಕ ಹಾಜರ್ ಮಾಡಲ್ಪಡಬೇಕು. ಶೇವಣಿ ಮೊಬಲಗು ಯಿಲ್ಲದೆ ಬರುವ ದರಖಾಸ್ತುಗಳು ತಿರಸ್ಕರಿಸಲ್ಪಡುವವು. "ಬೆಂಗಳೂರಲ್ಲಿರುವ ಸೆಂಟ್ರಲ್ ಡಿಸ್ಟಿಲರಿಗೆ ಜಾಡಿಗಳು ಮತ್ತು ಬಿರಟೆಗಳು ಸರಬರಾಯಿ ಮಾಡುವದಕ್ಕೆ ದರಖಾಸ್ತ್" ಎಂದು ದರಖಾಸ್ತು ಲಿಫಾಫೇಮೇಲೆ ಬರಿಯಬೇಕು.

3. ದರಖಾಸ್ತಿನ ಆಕ್ಸೆರ್ ಮಂಜೂರಾತಿಯು ಎಕ್ಸೈಸ್ ಕಮ್ಮಿಷನರವರಿಗೆ ಸೇರಿದ್ದಾಗಿರುತ್ತೆ. ಕಮ್ಮಿದರಖಾಸ್ತನ್ನೇ ಆಗಲಿ ಯಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬ ನಿರ್ಬಂಧವು ಅವರಿಗೆ ಯಿರುವದಿಲ್ಲವು, ಮತ್ತು ಯಾವ ದರಖಾಸ್ತನ್ನೇ ಆಗಲಿ ತಿರಸ್ಕರಿಸಿದ್ದಕ್ಕೆ ಕಾರಣವನ್ನ ಕೊಡಲು ಅವರು ಬದ್ಧರಾಗಿರುವದಿಲ್ಲವು.

4. ದರಖಾಸ್ತು ಮಂಜೂರಾದ ಏಳು ದಿವಸಗಳೊಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕ್ರಮವಾದ ಸ್ಟ್ಯಾಂಪು ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು, ಹಾಗೆ ಮಾಡದೆ ತಪ್ಪಿದಲ್ಲಿ ಅವನ ದರಖಾಸ್ತು ವಜಾ ಮಾಡಲ್ಪಟ್ಟು ಸಂಚೆಕಾರ ತರೀಕ ಆವನಿಂದ ಒಪ್ಪಿಸಲ್ಪಟ್ಟ ಕೇವಣಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

5. ಎಕ್ಸೈಸ್ ಕಮ್ಮಿಷನರ್ ಸಾಹೆಬರವರ ಆಫಿಸ್ ನೋಟಿಸ್ ಬೋರ್ಡಿನ ಮೇಲೆ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನ ಹೆಸರು ಪ್ರಕಟಿಸಲ್ಪಡುವದು ದರಖಾಸ್ತನ್ನು ಅಂಗೀಕರಿಸಿದ್ದಕ್ಕಾಗಲಿ ಅಥವಾ ತಿರಸ್ಕರಿಸಿದ್ದಕ್ಕಾಗಲಿ ಕೇಳುವ ಯಾವ ವಿಧವಾದ ಪ್ರಶ್ನೆಗಳಿಗೂ ಜವಾಬ್ ದೊರೆಯಲಾರದು.

6. ಯಾವದಾವರೂ ಒಂದು ದರಖಾಸ್ತು ಅಂಗೀಕರಿಸಲ್ಪಟ್ಟ ತರುವಾಯ ತಿರಸ್ಕರಿಸಲ್ಪಟ್ಟ ದರಖಾಸ್ತುದಾರುಗಳ ಕೇವಣೀ ಮೊಬಲಗು ಅವರವರಿಗೆ ವಾಪಸ್ ಮಾಡಲ್ಪಡುವದು.

7. ಜಾಡಿ ಮತ್ತು ಬಿರಟೆಗಳ ಮಾದರಿಗಳನ್ನು ಎಕ್ಸೈಸ್ ಕಮ್ಮಿಷನರ್ ಸಾಹೆಬರವರ ಆಫಿಸಿನಲ್ಲಿ ನೋಡಬಹುದು.

ಜೆ. ಎ. ಕ್ಯಾಂಪಬೆಲ್,
ಎಕ್ಸೈಸ್ ಕಮ್ಮಿಷನರ್.

ಕೋಲಾರ ಡಿವೀಜ್.

ತಾರೀಖು 10ನೇ ಸೆಪ್ಟಂಬರ್ 1889.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸೋಣಾದ ಸಬ್ ರೆಜಿಸ್ಟ್ರಾರ್ರ ಆಫಿಸಿನಲ್ಲಿ ಹಾಜರಾದ ತಂಗಾಳಿಗಳು ಪೇವಾರಸಾಗಿ 2 ವರುಷಗಳು ಮೇಲ್ಪಟ್ಟು ನಿಂತಿರುತ್ತೆ, ಅವುಗಳನ್ನ ಹಾಜರ್ಮಾಡಿದವರೇ ಆಗಲಿ ಅವುಗಳಲ್ಲಿ ಬಾಧ್ಯತೆ ವುಂಟಾದವರೇ ಆಗಲಿ ಈ ನೋಟಿಫಿಕೇರ್ಷ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಸಬ್ ರೆಜಿಸ್ಟ್ರಾರ್ರಲ್ಲಿ ಹಾಜರಾಗಿ ವಾಜವಿ ಫೀಜು ಪಾವತಿಮಾಡಿ ವಾಪಸ್ ಪಡೆಯಬಹುದು, ಇಲ್ಲವಾದರೆ ರೆಜಿಸ್ಟ್ರೇರ್ಷ ಅಕ್ಟ 85ನೇ ಸೆಕ್ಷನ್ ಪ್ರಕಾರ ಅವುಗಳು ನಾಶ ಪಡಿಸಲ್ಪಡುವವು.

ಆಫಿಸ್ ಹೆಸರು.	ದಸ್ತಾವೇಜಿನ ನಂಬರ್.	ಕಕ್ಷಿಗಾರರು.		ರಿಜಿಸ್ಟ್ರಿಗೆ ಬಿಟ್ಟುಕೊಟ್ಟ ತಾರೀಖು.	ರಿಜಿಸ್ಟ್ರಿಯಾದ ತಾರೀಖು.	ದಸ್ತಾವೇಜಿನ ಸ್ವಭಾವ.
		ದಸ್ತಾವೇಜು ಬರದುಕೊಟ್ಟವನ ಹೆಸರು.	ದಸ್ತಾವೇಜು ಬರಿಸಿಕೊಂಡವನ ಹೆಸರು.			
ಬವರಿಂಗ್‌ಪೇಟೆ ಸಬ್ ರೆಜಿಸ್ಟ್ರಾರ್ ಆಫಿಸ್.	1886—1887 / 152	ಕನ್ನೂರಪ್ಪ ಕಟ್ಟ	ನೀರುಗಂಜಿ ಗಂಟ್ಲೂಡಿ	30—1—87	31—1—87	ಮೊರ್ಕುಪ್ಪ ಗ್ರಾಮದ ಬಳಿಯ ಖುಷ್ಕಿ 11ನೇ ನಂಬರ್ ೦-೦-೩ ಕಂದಾಯ ರೂ. 5-3-4ಪೈ ನಂ. 12ನೇ ಖುಷ್ಕಿ ೦-೦೩ ಕಂದಾಯ ರೂಪಾಯಿ 5-3-2ಪೈ ಈ 2 ಜಮೀನೂ ನಿಮಿಗೆ ಕ್ರಯಮಾಡಿ ಕೊಟ್ಟು 100 ರೂಪಾಯಿ ತೆಗದುಕೊಂಡ್ಡುಇದೆನೆಂದು
	1887—1888 / ತಿರಸ್ಕರಿಸಲ್ಪಟ್ಟಿತ್ತೆ	ಹನುಮಂತರಾವ್	ರಾಮಯ್ಯ	13—6—87	27—6—87	ತಂಗಲುಕುಪ್ಪದ ಆವಾನೀ ಪೈಕಿ 928ನೇ ನಂಬರ್ ಜಮೀನ್ ಬೀಜವರಿ ॥೨॥ ಜಮೀನು ನಿಮಗೆ ಕುದ್ದ ಕ್ರಯ ಮಾಡಿಕೊಟ್ಟು ನಿಮ್ಮಿಂದ 45 ರೂಪಾಯಿ ತೆಗದುಕೊಂಡು ಯಿದೇನೆಂದು

ಅಬ್ದುಲ್‌ರಹಿಮ್ಮಾನ್,
ರೆಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 9ನೇ ಸೆಪ್ಟಂಬರ್ 1889.

ತುಮಕೂರು ಡಿಸ್ಟ್ರಿಕ್ಟು ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ದಾರ್ರಿಗೆ ಇದರಿಂದ ತಿಳಿಯಪಡಿಸುವದೇನಂದರೆ, ಸ್ರ 1889ನೇ ಇಸವಿ ಮಾರ್ಚ್ ತಾರೀಖು 31ರ ವರಿಗಿನ ಬಡ್ಡೀ ಮೊಬಲಗು, ಪ್ಯಾಸ್ ಬುಕ್ಕುಗಳಲ್ಲಿ ದಾಖಲ್ಮಾಡಲು ಈ ಆಫಿಸಿಗೆ ಕಳುಹಿಸಬೇಕಾಗಿ ಇದರಿಂದ ತಿಳಿಯಪಡಿಸಿ ಯಿದೆ.

ಪಿಹೆ. ನಂಜುಂಡರಾಜೇ ಅರಸ್,
ಟ್ರೆಜರೀ ಆಫಿಸರ್.